ತಯಾರುಮಾಡಿ ಇಡೀ ಭಾರತದಲ್ಲಿಯೇ ಹೆಸರು ಪಡೆದಂತಹ ಕಾರ್ಖಾನೆ ಇದು. ಈಗ ಇದು ಹಾಳಾಗಿದೆ. ಆದ್ದರಿಂದ ಇದಕ್ಕೆ ಇದ್ದಂತಹ ಕೀರ್ತಿಯನ್ನು ಉಳಿಸಿಕೊಳ್ಳಲು, ಇದನ್ನು ಅಭಿವೃದ್ಧಿ ಮಾಡಲು ಇದನ್ನು ಬಡಾವಣೆ ಮಾಡುವುದಕ್ಕೆ ಯೋಚನೆ ಮಾಡುತ್ತೀರಾ?

(ಉತ್ತರವಿಲ್ಲ)

ಶ್ರೀ ಎಚ್.ಡಿ. ದೇವೇಗೌಡ.—ಇದು ಸಣ್ಣ ಕಾರ್ಖಾನೆ ನಿಜ. ಇದನ್ನು ವಿಸ್ತರಣೆ ಮಾಡಬೇಕು ಎಂದು ಹೇಳಿ ಈಗಾಗಲೇ ಯೋಜನೆಯನ್ನು ತಯಾರು ಮಾಡಿದ್ದಾರೆ. ಕೈಗಾರಿಕಾ ಇಲಾಖೆಯನ್ನು ತಾವೇ ನೋಡಿಕೊಳ್ಳತಕ್ಕ ಜವಾಬ್ದಾರಿಯನ್ನು ಹೊತ್ತಿರುವುದರಿಂದ ತಪಸಿಗೆ ಪೂರ್ಣ ಮಾಹಿತಿಯಿಲ್ಲವೆಂದು ಕಾಣುತ್ತದೆ. ಪಬ್ಲಿಕ್ ಅಕೌಂಟ್ಸ್ ಕಮಿಟಿಯಲ್ಲಿ ಇದನ್ನು ನಾವು ರಿಪ್ಲೈ ಮಾಡಿದ್ದೇವೆ. ಈ ಫ್ಯಾಕ್ಟರಿಯನ್ನು ಪಯಬಲ್ ಯುನಿಟ್ ಆಗಿ ಕೇಸು ಮಾಡತಕ್ಕದ್ದಕ್ಕೆ ಇದನ್ನು ಬಡಾವಣೆ ಮಾಡಬೇಕು ಎಂದು ಯೋಜನೆಯನ್ನು ತಯಾರು ಮಾಡಿದ್ದಾರೆ. ಇದನ್ನು ಕಾರ್ಯರೂಪಕ್ಕೆ ತರಬೇಕು ಇದ್ದೇ. ದಯವಿಟ್ಟು ತಾವು ಇದನ್ನು ಪರಿಶೀಲನೆಮಾಡಿ ಹಾಲಿ ಇರತಕ್ಕ ಯೋಜನೆಯನ್ನ ಕಾರ್ಯರೂಪಕ್ಕೆ ತರುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಆರ್. ಗುಂಡೂರಾವ್.—ಮಾನ್ಯ ದೇವೇಗೌಡರು ಈ ಕಾರ್ಖಾನೆಯನ್ನು ಬಡಾವಣೆ ಮಾಡಬೇಕು ಎನ್ನತಕ್ಕ ಯೋಜನೆಯನ್ನು ತಯಾರು ಮಾಡಿದ್ದಾರೆ, ಅದನ್ನು ಕಾರ್ಯರೂಪಕ್ಕೆ ತರಬೇಕು ಎಂದು ಹೇಳಿದ್ದಾರೆ. ಆ ಯೋಜನೆ ಯಾವ ಹಂತದಲ್ಲಿದೆ ಎಂದು ನಾನು ವಿಚಾರ ಮಾಡುತ್ತೇನೆ.

Chamundi Hill at Mysore as Tourist Centre

189 SHRI H. GANGADHARAN (Krishnaraja).—Will the Chief Minister be pleased to state:—

(a) whether the Government has any proposal to make Chamundi Hill Mysore a Tourist Centre;

(b) whether there was any proposal for making Chamundi Hill as notified area ?

SRI R. GUNDU RAO (Chief Minister).—

(a) Chamundi Hill is a place of Tourist interest. The development of Chamundi Hill was a part of the Nehru Loka Scheme which has been dropped.

(b) There is a proposal to make Chamundi Hill a notified area.

ಶ್ರೀ ಎಚ್. ಗಂಗಾಧರನ್ —ಮೈಸೂರು ಚಾಮುಂಡಿ ಬೆಟ್ಟವನ್ನು ಪ್ರವಾಸ ಕೇಂದ್ರವನ್ನಾಗಿ ಮಾಡಬೇಕು ಎನ್ನುವ ಯೋಜನೆ ಯಾವ ಹಂತದಲ್ಲಿದೆ? ನನ್ನ ಪ್ರಶ್ನೆಗೆ ಉತ್ತರವಾಗಿ ನೆಹ್ರೂ ಲೋಕ ಯೋಜನೆಯನ್ನು ಕೈಬಿಟ್ಟಿದ್ದರಿಂದ ಇದನ್ನೂ ಕೈಬಿಡಲಾಗಿದೆಯೆಂದು ತಿಳಿಸಿದ್ದೀರಿ. ಕೊನೆಯಲ್ಲಿ, ಚಾಮುಂಡಿ ಬೆಟ್ಟವನ್ನು ನೋಟಿಫೈಡ್ ಏರಿಯಾ ಆಗಿ ಮಾಡುವುದಕ್ಕೆ ಪ್ರಪೋಸಲ್ ಇದೆಯೆಂದು ತಿಳಿಸಿರುವಿರಿ. ಇದರ ಬಗ್ಗೆ ಟೂರಿಸ್ಟ್ ಡೆವಲಪ್‌ಮೆಂಟ್ ಕಾರ್ಪೊರೇಷನ್‌ನವರು ಇಲ್ಲಿ ಏನನ್ನೂ ಮಾಡಿಲ್ಲ. ಇದನ್ನು ಪ್ರವಾಸಿ ಕೇಂದ್ರವನ್ನಾಗಿ ಮಾಡುವುದಕ್ಕೆ ಸರ್ಕಾರದಲ್ಲಿ ಯೋಜನೆ ಏನಾದರೂ ಇದೆಯೇ?

ಶ್ರೀ ಆರ್. ಗುಂಡೂರಾವ್. —ಮಾನ್ಯ ಅಧ್ಯಕ್ಷರೇ, ನಮಗೆಲ್ಲರಿಗೂ ಗೊತ್ತಿರುವಹಾಗೆ ಚಾಮುಂಡಿ ಬೆಟ್ಟ ಒಂದು ಪವಿತ್ರವಾದ ಸ್ಥಳ. ಇದನ್ನು ಪ್ರವಾಸಿ ಕೇಂದ್ರವನ್ನಾಗಿ ಮಾಡಲಿಕ್ಕಾಗುವುದಿಲ್ಲ. ಮೈಸೂರು ಈಗಾಗಲೇ ಪ್ರವಾಸಿ ಕೇಂದ್ರವಾಗಿದೆ. ಮೈಸೂರಿನ ಅರಮನೆ, ನಾಗರಹೊಳೆ, ಬಂಡಿಪುರದ ಸ್ಯಾಂಕ್ಚುಯರಿ, ಕೆ.ಆರ್.ಎಸ್. ಎಲ್ಲಾ ಸೇರಿ ಇದೊಂದು ಪ್ರವಾಸಿ ಕೇಂದ್ರವೇ ಆಗಿದೆ. ನೆಹ್ರೂಲೋಕ ಯೋಜನೆಯನ್ನು ತಯಾರು ಮಾಡಿ, ಡಿಸ್ನಿಲ್ಯಾಂಡ್ ತರಹ ಮೈಸೂರನ್ನು ಮಾಡಬೇಕು ಎಂದು ಯೋಜನೆ ಇತ್ತು. ಆದರೆ ಕೇಂದ್ರದಿಂದ ಇದಕ್ಕೆ ಹಣ ಸಿಕ್ಕಿಲ್ಲವಾದ್ದರಿಂದ ಈ ಯೋಜನೆಯನ್ನು ಕೈಬಿಡಲಾಯಿತು.

ಮೈಸೂರಿನ ಅರಮನೆ ಇದೆ. ಅಲ್ಲಿ ಹೋಟೆಲ್ ಇದೆ, ಮೈಸೂರಿನ ಸುತ್ತಮುತ್ತ ನೈಸರ್ಗಿಕ ಸೌಂದರ್ಯ ಇದೆ, ಇದೆಲ್ಲಾ ಕಾರಣಗಳಿಂದ ಅದು ಈಗಾಗಲೇ ಪ್ರವಾಸಿ ಕೇಂದ್ರವಾಗಿಯೇ ಇದೆ. ಇನ್ನು ಚಾಮುಂಡಿ ಬೆಟ್ಟದ ಮೇಲೆ ನಾವು ಹೋಟೆಲ್‌ಗಳು ಇತ್ಯಾದಿಗಳನ್ನು ಪ್ರಾರಂಭಿಸಿದರೆ ಅದರ ಪವಿತ್ರತೆ ಹೋಗುತ್ತದೆ. ಆದುದರಿಂದ ಅದನ್ನು ಹಾಗೆಯೇ ಇಟ್ಟಿರುವುದು ಒಳ್ಳೆಯದು.

ಶ್ರೀ ಎಚ್. ಗಂಗಾಧರಸ್.—ನಮಗೆ ಗೊತ್ತಿರುವ ಹಾಗೆ ಎಲ್ಲಾ ರಾಜ್ಯಗಳಲ್ಲಿಯೂ ದೇವಸ್ಥಾನಗಳು ಇರುವ ಕಡೆ ಒಂದೊಂದು ಪ್ರವಾಸಿ ಕೇಂದ್ರವನ್ನು ಮಾಡಿದ್ದಾರೆ. ಆಂಧ್ರದಲ್ಲಿ ತಿರುಪತಿ ದೇವಸ್ಥಾನವಿದೆ ಕೇರಳದಲ್ಲಿ ಗುರುವಾಯೂರು ಇದೆ, ಆದರೆ ಕರ್ನಾಟಕದಲ್ಲಿ ಪ್ರಾಮುಖ್ಯವಾದುದು ಯಾವುದೂ ಇಲ್ಲ, ಚಾಮುಂಡಿ ಬೆಟ್ಟವನ್ನು ಪ್ರವಾಸಿ ಕೇಂದ್ರವನ್ನಾಗಿ ಮಾಡಿದರೆ ಪ್ರಪಂಚದ ಪ್ರವಾಸಿಗರನ್ನು ಆಕರ್ಷಣೆ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲವೇ? ಈ ಕೆಲಸವನ್ನು ತಾವು ಕೈಗೊಳ್ಳಬೇಕಾದರೆ ಅಲ್ಲಿ ವಸತಿ ಗೃಹಗಳನ್ನು ಮಾಡಬೇಕಾಗುತ್ತದೆ. ಟೂರಿಸಂ ಡಿಪಾರ್ಟ್‌ಮೆಂಟಿನವರು ಅದರ ಸೌಂದರ್ಯವನ್ನು ವಿಸ್ತರಿಸಬೇಕಾಗುತ್ತದೆ. ಚಂದೀಘರ್‌ನಲ್ಲಿ ಪಬ್ಲಿಕ್ ವರ್ಕ್ಸ್ ಡಿಪಾರ್ಟ್‌ಮೆಂಟಿನವರು ರಾಕ್ ಗ್ಯಾಂಡ್ ಎಂದು ಮಾಡಿ ಒಂದು ದಿವಸಕ್ಕೆ ೩ ರಿಂದ ೬ ಸಾವಿರ ರೂಪಾಯಿಗಳವರೆಗೆ ಸಂಪಾದನೆ ಮಾಡುತ್ತಿದ್ದಾರೆ. ಅದೇ ರೀತಿಯಲ್ಲಿ ಮೈಸೂರಿನಲ್ಲಿಯೂ ಸಹ ಗಾರ್ಡನ್ ಮಾಡಲಿಕ್ಕೆ ಅವಕಾಶವಿದೆ. ಈಗ ಅರಮನೆ ಸರ್ಕಾರದವರ ವಶದಲ್ಲಿದೆ, ಅಲ್ಲಿ ಲೈಟ್ ಅಂಡ್ ಸೌಂಡ್ ಎಫೆಕ್ಟ್ಸ್ ಮಾಡುವ ಹಾಗೆ ಏನಾದರೂ ಒಂದು ನಿರ್ದಿಷ್ಟವಾದ ಯೋಜನೆಯನ್ನು ಹಾಕಿಕೊಂಡು ಟೂರಿಸ್ಟ್ ಡಿಪಾರ್ಟ್‌ಮೆಂಟಿನ ಮುಖಾಂತರ ಇದನ್ನು ಅಭಿವೃದ್ಧಿ ಮಾಡುವುದಕ್ಕೆ ಸರ್ಕಾರದವರು ಗಮನ ಕೊಡುತ್ತಾರೆಯೇ?

ಶ್ರೀ ಆರ್. ಗುಂಡೂರಾವ್.—ಮೈಸೂರನ್ನು ಪ್ರವಾಸಿ ಕೇಂದ್ರವನ್ನಾಗಿ ಮಾಡಬೇಕು ಎಂದು ಮಾನ್ಯ ಸದಸ್ಯರಿಗೆ ಎಷ್ಟು ಕಳಕಳಿ ಇದೆಯೋ ಅಷ್ಟೇ ಆಸಕ್ತಿ ನನಗೂ ಇದೆ. ಈಗ ಮೈಸೂರಿನ ಹೆಸರು ವಾಸಿಯಾದ ಪೆಡ್ಡ ಪ್ರಪಂಚದಲ್ಲಿ ಎಲ್ಲಿಯೂ ಇಲ್ಲ. ಈಗ ಇದು ನಿಂತು ಹೋಗಿದೆ. ಈಗ ಅದನ್ನು ಪುನಃ ಪ್ರಾರಂಭ ಮಾಡಬೇಕು ಎನ್ನುವ ಯೋಜನೆ ನಮ್ಮಲ್ಲಿ ಇದೆ. ಅಲ್ಲಿ ಕಬಿನಿ ಯೋಜನೆ ಬಂದಮೇಲೆ ಆ ಭಾಗದ ಪ್ರದೇಶ ಮುಳುಗಡೆಯಾದ ಕಾರಣ ಪೆಡ್ಡವನ್ನು ಸರ್ಕಾರದವರು ಕೈಬಿಟ್ಟಿದ್ದರು, ಇದಕ್ಕೆ ನಮ್ಮ ಅಧಿಕಾರಿಗಳು ಸರಿಯಾದ ಸ್ಥಳವನ್ನು ನೋಡುತ್ತಿದ್ದಾರೆ. ಇದನ್ನು ಪ್ರಾರಂಭ ಮಾಡಬೇಕು ಎನ್ನುವುದು ನಮ್ಮ ಸರ್ಕಾರದ ಉದ್ದೇಶ. ಇದರ ಜೊತೆಗೆ ನಾಗರಹೊಳೆ, ಬಂಡೀಪುರದಲ್ಲಿರುವ ವನ್ಯ ಸಂಪತ್ತನ್ನು ಹೆಚ್ಚು ಮಾಡುವ ಸಂಬವವೂ ಇದೆ. ಈ ಎಲ್ಲಾ ಸ್ಥಳಗಳು ಮೈಸೂರಿನ ಸುತ್ತ ೨೫ ಮೈಲಿ ಪ್ರದೇಶದಲ್ಲಿ ಬರುವುದರಿಂದ ಮೈಸೂರು ತಾನಾಗಿಯೇ ಅಭಿವೃದ್ಧಿಯಾಗುತ್ತದೆ. ಈಗ ನಮ್ಮಲ್ಲಿ ಜನರು ತಿರುಪತಿಗೆ ಹೊಗುತ್ತಾರೆ, ಧರ್ಮಸ್ಥಳಕ್ಕೆ ಹೋಗುತ್ತಾರೆ, ಇನ್ನೂ ಬೇರೆ ಬೇರೆ ದೇವಸ್ಥಾನಗಳಿಗೆ ಹೋಗುತ್ತಾರೆ. ಅದು ಅವರವರ ನಂಬಿಕೆಯನ್ನು ಅವಲಂಬಿಸಿರುತ್ತದೆ. ಮೈಸೂರಿಗೆ ಹೋಗುವವರು ಬಹಳ ಜನ. ಆದರೆ ಅವರಿಗೆ ಅಂಥ ಸ್ಥಿತಿಗತಿಗಳಲ್ಲಿ ಬದಲಾವಣೆಯೇನೂ ಕಾಣಲಿಲ್ಲವೆಂದು ಕಾಣುತ್ತವೆ. ಅಲ್ಲಿಗೆ ಬರುವವರ ಸಂಖ್ಯೆ ಇತರ ದೇವಸ್ಥಾನಗಳಿಗೆ ಹೋಲಿಕೆ ಮಾಡಿದರೆ ಕಡಿಮೆ. ಈಗ ತಿರುಪತಿಗೆ ಏಕೆ ಜಾಸ್ತಿ ಜನ ಹೋಗುತ್ತಾರೆ? ಮೊದಲು ಸಂಜೀವಯ್ಯನವರು ದೇವಸ್ಥಾನಕ್ಕೆ ಹೋದಮೇಲೆ ಅವರು ಮುಖ್ಯಮಂತ್ರಿಯಾದರು ಸಂಜೀವರೆಡ್ಡಿಯವರು ಸ್ಪೀಕರ್ ಆದರು, ಶ್ರೀಮತಿ ಗಾಂಧಿಯವರು ಅಲ್ಲಿಗೆ ಹೋದಮೇಲೆ ಮತ್ತೆ ಪ್ರಧಾನ ಮಂತ್ರಿಯಾದರು, ನಾನು ಅಲ್ಲಿಗೆ ಹೋಗಿ ಬಂದಮೇಲೆ ಮುಖ್ಯಮಂತ್ರಿಯಾದೆ ಈ ರೀತಿಯಾಗಿ ಏನಾದರೊಂದು ಒಳ್ಳೆಯ ಕೆಲಸ ಅವರಿಗೆ ಒದಗಿಬಂದರೆ ಆದಕ್ಕೆ ಹೆಚ್ಚಿನ ಪ್ರಾಮುಖ್ಯತೆ ಬರುತ್ತದೆ. ಈಗ ನಮ್ಮಲ್ಲಿ ಧರ್ಮಸ್ಥಳಕ್ಕೆ ಹೋಗುವವರು ಜಾಸ್ತಿ. ಮಲೆ ಮಹದೇಶ್ವರ ಬೆಟ್ಟಕ್ಕೆ ಹೋಗುವವರು ಜಾಸ್ತಿ ಇದ್ದಾರೆ, ಇವುಗಳೆಲ್ಲವೂ ನಾವು ಯಾವ ರೀತಿಯಲ್ಲಿಯೂ ಗಮನ ಕೊಡದಿದ್ದರೂ ಸಹ ಅವುಗಳೇ ಪ್ರವಾಸಿಗರನ್ನು ಆಕರ್ಷಣೆ ಮಾಡಿಕೊಂಡು ಹೋಗುತ್ತವೆ. ಮೈಸೂರು ನಮ್ಮ ರಾಜ್ಯದಲ್ಲಿಯೇ ಉತ್ತಮವಾದಂತ ಪ್ರವಾಸಿ ಕೇಂದ್ರವನ್ನಾಗಿ ಮಾಡುವುದಕ್ಕೆ ಅವಕಾಶವಿದೆ. ಮೈಸೂರಿನ ಸೌಂದರ್ಯ ಎಲ್ಲಾ ಕಡೆಯಲ್ಲಿಯೂ ಪ್ರಚಾರವಾಗಿದೆ. ಇನ್ನೂ ಹೆಚ್ಚು ರೀತಿಯಲ್ಲಿ ಇದರ ಸೌಂದರ್ಯ ಪ್ರಚಾರವಾಗಲಿಕ್ಕೆ ನಾವು ಸಾಕಷ್ಟು ಕ್ರಮವನ್ನು ಕೈಗೊಳ್ಳುತ್ತೇವೆ.

ಶ್ರೀ ಡಿ. ಜಯದೇವರಾಜ ಅರಸ್.—ಸ್ವಾಮಿ, ಉತ್ತರದಲ್ಲಿ ಮೈಸೂರಿನ ಚಾಮುಂಡಿ ಬೆಟ್ಟವನ್ನು ಪ್ರವಾಸಿ ಕೇಂದ್ರವನ್ನಾಗಿ ಮಾಡುವ ಯೋಜನೆಯನ್ನು ಸಾಧ್ಯಕ್ಕೆ ಕೈಬಿಡಲಾಗಿದೆ ಎಂದು ತಿಳಿಸಿದ್ದೀರಿ. ಚಾಮುಂಡಿ ಬೆಟ್ಟಕ್ಕೆ ಈಗಾಗಲೇ ಒಂದು ದಿವಸಕ್ಕೆ ೨ ರಿಂದ ೩ ಸಾವಿರ ಜನರು ಬಂದು ಹೋಗುತ್ತಿದ್ದಾರೆ. ಈಗ ಪ್ರವಾಸಿಗರಿಗೆ ಅಲ್ಲಿ ಸಾಕಷ್ಟು ಸೌಲಭ್ಯಗಳನ್ನು ಒದಗಿಸಬೇಕಾಗಿದೆ. ಈ ಸೌಲಭ್ಯಗಳನ್ನು ಅಲ್ಲಿ

ಒದಗಿಸುವುದಕ್ಕೆ ಟೂರಿಸಂ ಕಾರ್ಪೊರೇಷನ್‌ನವರಿಗೆ ಸೂಚನೆ ಕೊಡುತ್ತೀರಾ? ಇದನ್ನು ನೋಟಿಫೈಡ್ ಏರಿಯಾ ಮಾಡುವುದಕ್ಕೆ ಅವಕಾಶವಿದೆ. ಈ ಕೆಲಸವನ್ನು ಆದಷ್ಟು ಜಾಗ್ರತೆಯಾಗಿ ಮಾಡಿ ಅನುಕೂಲ ಮಾಡಿಕೊಡುತ್ತೀರಾ?

ಶ್ರೀ ಆರ್. ಗುಂಡೂರಾವ್.—ಅಲ್ಲಿ ಪ್ರವಾಸಿಗರು ಜಾಸ್ತಿ ಸಂಖ್ಯೆಯಲ್ಲಿ ಬರುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆ. ಮಾನ್ಯ ಸದಸ್ಯರ ಅಭಿಪ್ರಾಯದಂತೆ ಅಲ್ಲಿ ಪ್ರವಾಸಿಗರು ಉಳಿದುಕೊಳ್ಳುವುದಕ್ಕೆ ನಾವು ಹೋಟೆಲ್‌ಗಳನ್ನು ಮಾಡಿದರೆ ದೇವಸ್ಥಾನದ ಪವಿತ್ರತೆ ಹೋಗುತ್ತದೆ ಎಂದು ನನ್ನ ಅಭಿಪ್ರಾಯ. ನಿಜ ಹೇಳಬೇಕು ಎಂದರೆ ಮೈಸೂರಿನ ಅರಮನೆಯಲ್ಲಿ ಹೋಟಲ್ ಮಾಡಿದ್ದಕ್ಕೆ ನನ್ನ ವೈಯಂಕ್ತಿಕ ವಿರೋಧ ಇತ್ತು. ಅದು ಸರಿಯಲ್ಲ. ಇವುಗಳನ್ನು ನಾವು ವಿಶೇಷವಾಗಿ ಕಾಪಾಡಿಕೊಂಡು ಬರಬೇಕು. ಮೈಸೂರು ನಗರದಲ್ಲಿ ಏನು ಬೇಕಾದರೂ ಮಾಡಲಿ ಅದಕ್ಕೆ ನಮ್ಮ ಆಕ್ಷೇಪಣೆ ಇಲ್ಲ. ದೇವಸ್ಥಾನದ ಹತ್ತಿರ ಹೋಟೆಲ್‌ಗಳನ್ನು ಮಾಡಿ ಡ್ಯಾನ್ಸ್, ಪಗೈರೆಗೆ ಅವಕಾಶ ಕೊಡುವುದು ಸರಿಯಲ್ಲ. ಇಂಥಾದಕ್ಕೆ ಅಲ್ಲಿ ಆಸ್ಪದ ಇರಬಾರದು. ಪ್ರವಾಸಿಗರು ಬಂದು ಇಳಿದುಕೊಳ್ಳುವುದಕ್ಕೆ ಮೈಸೂರಿನಲ್ಲಿಯೇ ಬೇಕಾದಷ್ಟು ಕಾರ್ಯಕ್ರಮಗಳನ್ನು ತೆಗೆದುಕೊಳ್ಳೋಣ. ಇದನ್ನು ನೋಟಿಫೈಡ್ ಏರಿಯಾ ಆಗಿ ಮಾಡಬೇಕೆನ್ನುವುದು ಸರ್ಕಾರದವರ ತೀವ್ರ ಪರಿಶೀಲನೆಯಲ್ಲಿದೆ.

SRI AZEEZ SAIT.—Will the Hon'ble Chief Minister look into the proposal which I had submitted to the then Chief Minister, to undertake a project on the lines of Ocean Park at Hong Kong in the Chamundi Hill area ? There is also a report regarding Nehru Loka which is available with the Home Department. I think the Chamundi Hill area will be an ideal place of tourist spot to develop artificial lakes, swimming pools, tourist huts etc.

SRI R. GUNDU RAO.—When the hon. member was Tourism Minister, he has sent so many proposals to the Government and particularly about this Nehru Loka I agree that the Ocean park to be developed at Chamundi Hill area is a very attractive and colourful idea; but the difficulty is of finance.

SRI AZEEZ SAIT.—Sir, foreign collaborators are there, who are ready to invest finance.

SRI R. GUNDU RAO.—I would like to assure the hon. member that the Government is also keen on this issue. The other aspects of it will have to be examined. However. I will have a discussion with you and see even with the available finance, whether we will be able to implement it.

Allotment of Seats in Engineering Colleges

262 SRI M. SRINIVAS (Srirangapatna).—Will the Minister for Education be pleased to state:—

(a) the number of Students admitted to the Engineering Colleges in this state (Both private and Goverement Colleges) for the academic year 1978-79 with the number of following details.